**SL. No. : FF**

ಒಟ್ಟು ಪ್ರಶ್ನೆಗಳ ಸಂಖ್ಯೆ : 46 ]

Total No. of Questions : 46 ]

**CCE RR**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8

[ Total No. of Printed Pages : 8

**ಸಂಕೇತ ಸಂಖ್ಯೆ : 62-K**

**Code No. : 62-K**

# ವಿಷಯ : ತೃತೀಯ ಭಾಷೆ — ಕನ್ನಡ

# Subject : Third Language — KANNADA

**(ಹೊಸ ಪಠ್ಯಕ್ರಮ / New Syllabus)**

**(ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater)**

ದಿನಾಂಕ : 22. 06. 2017 ]

[ Date : 22. 06. 2017

ಸಮಯ : ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 12-00 ರವರೆಗೆ ]

[ Time : 9-30 A.M. to 12-00 Noon

ಗರಿಷ್ಠ ಅಂಕಗಳು : 80 ]

[ Max. Marks : 80

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 46 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ಕೊಡಲಾಗಿದೆ.

ಇಲ್ಲಿ ಕತ್ತರಿಸಿ

**TEAR HERE TO OPEN THE QUESTION PAPER**

**ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ**

**Tear here**

## ವಿಭಾಗ – ಎ

### (ಗದ್ಯ, ಪದ್ಯ, ಪೋಷಕ ಅಧ್ಯಯನ)

**ಈ ಕೆಳಗಿನ ಪ್ರಶ್ನೆಗಳಿಗೆ *ಒಂದೊಂದು* ವಾಕ್ಯದಲ್ಲಿ ಉತರಿಸಿ :** 10 × 1 = 10

1. ಅನಿಲ್ ಕುಂಬ್ಳೆಯವರು ಭಾರತೀಯ ಕ್ರಿಕೆಟ್ ತಂಡಕ್ಕೆ ಆಯ್ಕೆಯಾದದ್ದು ಯಾವಾಗ ?

2. ಅನಿಲ್ ಕುಂಬ್ಳೆಯವರು ಕ್ರಿಕೆಟ್ ಕಲಿಯಲು ಸೇರಿದ ಸಂಸ್ಥೆ ಯಾವುದು ?

3. ಅ.ರಾ. ಮಿತ್ರರವರು ತಿಳಿಸಿರುವಂತೆ ಹಾಸ್ಯಗಾರರ ಲಕ್ಷಣವೇನು ?

4. ಕುಲಕರ್ಣಿಯು ಗಾಳಿಯಲ್ಲಿ ಏಕೆ ಗುಂಡು ಹಾರಿಸಿದನು ?

5. ನಾ. ಕಸ್ತೂರಿಯವರು ಕಟ್ಟಿ ಕೊಟ್ಟಿರುವ ಯಾವುದಾದರೂ ಒಂದು ಗಾದೆಯನ್ನು ಬರೆಯಿರಿ.

6. ಕೋಗಿಲೆಯು ಎಲ್ಲಿ ಕುಳಿತು ಸುಮಧುರವಾಗಿ ಹಾಡುತ್ತಿದೆ ಎಂದು ಚೆನ್ನವೀರ ಕಣವಿಯವರು ಹೇಳಿದ್ದಾರೆ ?

7. 'ಅಕ್ಷರವನ್ನು' ಲಕ್ಷ್ಮಣರಾವ್‌ರವರು ಅಲ್ಲಾದೀನನ ಅದ್ಭುತ ಮಾಯಾದೀಪವೆಂದು ಏಕೆ ಕರೆದಿದ್ದಾರೆ ?

8. ಸ್ವಾತಿ ಮಳೆಯಿಂದಾಗುವ ಲಾಭಗಳೇನು ?

9. ಮತ್ತೊಬ್ಬರು ಮಾಡುವ ಸಾಲಕ್ಕೆ ಯಾರು ಹೊಣೆಯಾಗಬೇಕೆಂದು ಪುಲಿಗೆರೆ ಕವಿ ಸೋಮನು ಹೇಳಿದ್ದಾನೆ ?

10. ಧರ್ಮಪದನು ಕೊನಾರ್ಕ್ ದೇವಾಲಯಕ್ಕೆ ಏಕೆ ಬಂದನು ?

**ಈ ಕೆಳಗಿನ ಪ್ರಶ್ನೆಗಳಿಗೆ *ಮೂರು-ನಾಲ್ಕು* ವಾಕ್ಯಗಳಲ್ಲಿ ಉತ್ತರ ಬರೆಯಿರಿ :** 10 × 2 = 20

11. ಪೊಲೀಸಿನವನು ಗೊರೂರು ರಾಮಸ್ವಾಮಿ ಅಯ್ಯಂಗಾರರನ್ನು ಹೇಗೆ ಉಪಚರಿಸಿದನು ?

12. ಗೊರೂರು ರಾಮಸ್ವಾಮಿ ಅಯ್ಯಂಗಾರರು ಮಿನಿಪೊಲೀಸ್ ನಗರದಲ್ಲಿ ಎದುರಿಸಿದ ಸಮಸ್ಯೆಗಳನ್ನು ತಿಳಿಸಿ.

13. ಅನಿಲ್ ಕುಂಬ್ಳೆಯವರ ವಿದ್ಯಾಭ್ಯಾಸವನ್ನು ಕುರಿತು ಬರೆಯಿರಿ.

14. ಕೆಳದಿ ರಾಣಿ ಚೆನ್ನಮ್ಮನ ರಾಜ್ಯದ ಮೇಲೆ ದಾಳಿ ಮಾಡದೆ ಮೊಗಲರ ಸೈನ್ಯವು ಓಡಿ ಹೋಯಿತು. ಏಕೆ ?

15. ನಾ. ಕಸ್ತೂರಿಯವರು ತಮ್ಮ ಸ್ನೇಹಿತರೆದುರಲ್ಲಿ ತೋಡಿಕೊಂಡ ಸಂಕಟದ ಪ್ರಸಂಗ ಯಾವುದು ?

16. ನಿಸಾರ್ ಅಹಮದ್ ಅವರು ಏನೆಂದು ಪಣತೊಡಬೇಕೆಂದು ಹೇಳಿದ್ದಾರೆ ? ಏಕೆ ?

17. ವೈವಿಧ್ಯತೆಯಲ್ಲಿ ಏಕತೆ ಇದೆ ಎನ್ನುವುದಕ್ಕೆ 'ಒಂದೇ' ಪದ್ಯದಲ್ಲಿ ಕೊಟ್ಟಿರುವ ನಿದರ್ಶನಗಳಾವುವು ?

18. 'ದಾಸರ ಪದಗಳು' ಪದ್ಯದಲ್ಲಿ ತಿಳಿಸಿರುವಂತೆ ಮನಸ್ಸನ್ನು ಶುದ್ಧವಾಗಿಡುವ ಮಾರ್ಗಗಳಾವುವು ?

19. ಒಂದೇ ಗೇಣಿನ ಅಂತರದಲ್ಲಿ ಮುಕ್ತಿಯನ್ನು ಹೇಗೆ ಸಾಧಿಸಬಹುದೆಂದು ಪುರಂದರದಾಸರು ಹೇಳಿದ್ದಾರೆ ?

20. ಟಾಪ್‌ನಲ್ಲಿ ಪ್ರಯಾಣ ಮಾಡುವಾಗ ಈರಪ್ಪ ಎಂ. ಕಂಬಳಿಯವರು ಎದುರಿಸಿದ ಅಪಾಯದ ಕ್ಷಣದ ಬಗೆಗೆ ತಿಳಿಸಿ.

**ಈ ಕೆಳಗಿನ ಹೇಳಿಕೆಗಳನ್ನು ಸಂದರ್ಭದೊಡನೆ ಸ್ವಾರಸ್ಯವನ್ನು ವಿವರಿಸಿ :** 2 × 3 = 6

21. "ದೇವಿ ನನ್ನ ಅಪರಾಧವನ್ನು ಕ್ಷಮಿಸು"

22. "ಗೋಡೆಗೆ ಕಪ್ಪ ಬಳಿದ್ಹಂಗೆ"

23. **ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :** 1 × 3 = 3

ಅಕ್ಷರವೆಂಬುದು ........................................................

..............................................................................

......................................... ನಿನಗೆ ...........................

ಹೊಸ .................................................... ಹೊಸರೂಪ.

*ಅಥವಾ*

ದೀಪ ...................................................................

........................... ಶಕ್ತ ...........................................

ಅವನ ...................................................................

.................................................................. ಸಮಸ್ತ.

**ಈ ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ ಮತ್ತು ಕೃತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ :** 2 × 3 = 6

24. ಜಿ.ಪಿ. ರಾಜರತ್ನಂ

25. ಚೆನ್ನವೀರ ಕಣವಿ

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** $2 \times 4 = 8$

26. ಸೋಮಣ್ಣನು ಕುಲಕರ್ಣಿಯ ಕೃತ್ಯವನ್ನು ಹೇಗೆ ವಿರೋಧಿಸಿದನು ? ನಿಮ್ಮ ಮಾತುಗಳಲ್ಲಿ ಬರೆಯಿರಿ.

***ಅಥವಾ***

ರಾಮಸಿಂಗ್ ಮತ್ತು ಅವನ ಕುಟುಂಬದವರ ದೇಶಭಕ್ತಿ ಮತ್ತು ತ್ಯಾಗವನ್ನು ನಿಮ್ಮ ಮಾತುಗಳಲ್ಲಿ ಬರಯಿರಿ.

27. 'ವಚನ' ಪದ್ಯದಲ್ಲಿ ಹೇಳಿರುವಂತೆ ಮನುಷ್ಯನನ್ನು ಕಾಡುತ್ತಿರುವ ಚಿಂತೆಗಳು ಯಾವುವು ? ವಿವರಿಸಿ.

***ಅಥವಾ***

ಶಿವನ ಚಿಂತೆಯಲ್ಲಿ ಇರುವ ಒಬ್ಬರನ್ನೂ ಕಾಣಲು ಸಾಧ್ಯವಿಲ್ಲವೆಂದು ಅಂಬಿಗರ ಚೌಡಯ್ಯನು ಏಕೆ ಹೇಳಿದ್ದಾನೆ ? ವಿವರಿಸಿ.

## ವಿಭಾಗ – ಬಿ

### (ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು)

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** $12 \times 1 = 12$

28. 'ಅನಿಲ್ ಕುಂಬ್ಳೆ ಜಗತ್ತಿನ ಶ್ರೇಷ್ಠ ಬೌಲರುಗಳಲ್ಲಿ ಒಬ್ಬರು' — ಈ ವಾಕ್ಯದಲ್ಲಿರುವ ಅನ್ಯದೇಶೀಯ ಪದ

(ಎ) ಅನಿಲ್ ಕುಂಬ್ಳೆ (ಬಿ) ಜಗತ್ತಿನ

(ಸಿ) ಶ್ರೇಷ್ಠ (ಡಿ) ಬೌಲರ್

29. ಕನ್ನಡ ವರ್ಣಮಾಲೆಯಲ್ಲಿರುವ ಒಟ್ಟು ವ್ಯಂಜನಾಕ್ಷರಗಳು

(ಎ) 13 (ಬಿ) 25

(ಸಿ) 34 (ಡಿ) 49

30. 'ಭೂಮಿಯಲ್ಲಿ' — ಈ ಪದವನ್ನು ಬಿಡಿಸಿ ಬರೆದಾಗ

(ಎ) ಭೂಮಿ + ಅಲ್ಲಿ (ಬಿ) ಭೂ + ಮಿಯಲ್ಲಿ

(ಸಿ) ಭೂಮಿ + ಯಲ್ಲಿ (ಡಿ) ಭೂಮಿ + ಇಲ್ಲಿ

31. 'ಹಗಲು' — ಈ ಪದದ ವಿರುದ್ಧಾರ್ಥಕ ರೂಪ

(ಎ) ನೆರಳು (ಬಿ) ಇರುಳು

(ಸಿ) ಬೆಳಕು (ಡಿ) ಬೆಳಗು

32. ಕೆಳಗಿನ ಪದಗಳಲ್ಲಿ 'ದ್ವಿತೀಯಾ ವಿಭಕ್ತಿ' ಪ್ರತ್ಯಯವನ್ನು ಒಳಗೊಂಡ ಪದ

(ಎ) ಕರ್ನಾಟಕದಿಂದ (ಬಿ) ಕರ್ನಾಟಕವನ್ನು

(ಸಿ) ಕರ್ನಾಟಕದಲ್ಲಿ (ಡಿ) ಕರ್ನಾಟಕದ

33. 'ಜಾಣ ಹುಡುಗಿಯರು ಅರಳು ಹುರಿದಂತೆ ಪಟಪಟ ಮಾತನಾಡುತ್ತಾರೆ.' — ಈ ವಾಕ್ಯದಲ್ಲಿರುವ ಅನುಕರಣಾವ್ಯಯ ಪದ

(ಎ) ಜಾಣ ಹುಡುಗಿಯರು (ಬಿ) ಅರಳು ಹುರಿದಂತೆ

(ಸಿ) ಪಟಪಟ (ಡಿ) ಮಾತನಾಡುತ್ತಾರೆ

34. ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿರುವ ವಾಕ್ಯವೇ

(ಎ) ಸರಳ ವಾಕ್ಯ (ಬಿ) ಸಾಮಾನ್ಯ ವಾಕ್ಯ

(ಸಿ) ಸಂಯೋಜಿತ ವಾಕ್ಯ (ಡಿ) ಮಿಶ್ರವಾಕ್ಯ

35. 'ನಿಚ್ಚ' — ಈ ಪದದ ತತ್ಸಮ ರೂಪ

(ಎ) ನಿಚ್ಯ (ಬಿ) ನಿತ್ಯ

(ಸಿ) ನಿಜ (ಡಿ) ನೀಚ

36. ಅಚ್ಚರಿ, ತಿರಸ್ಕಾರ ಮುಂತಾದ ಭಾವನೆಗಳನ್ನು ಬರವಣಿಗೆಯಲ್ಲಿ ವ್ಯಕ್ತಪಡಿಸುವಾಗ ಬಳಸುವ ಲೇಖನ ಚಿಹ್ನೆ

(ಎ) ಭಾವಸೂಚಕ (ಬಿ) ಪ್ರಶ್ನಾರ್ಥಕ

(ಸಿ) ಪೂರ್ಣವಿರಾಮ (ಡಿ) ಅಲ್ಪವಿರಾಮ

37. 'ಪೀಳಿಗೆ' — ಈ ಪದದ ಅರ್ಥ

(ಎ) ಅವನತಿ (ಬಿ) ಸಂತತಿ

(ಸಿ) ಸದ್ಗತಿ (ಡಿ) ಪರಿಸ್ಥಿತಿ

38. 'ಗಂಗಾನದಿಯ ತೀರದಲ್ಲಿ ಸಾವಿರಾರು ಮರಗಳಿವೆ' — ಈ ವಾಕ್ಯದಲ್ಲಿರುವ ಅಂಕಿತನಾಮ

(ಎ) ಗಂಗಾ (ಬಿ) ನದಿ

(ಸಿ) ಸಾವಿರಾರು (ಡಿ) ಮರ

39. 'ಚಿಕ್ಕ ಮಕ್ಕಳ ಆಟಪಾಠಗಳನ್ನು ಮತ್ತೆ ಮತ್ತೆ ನೋಡಲು ಬಲು ಚೆನ್ನ' — ಈ ವಾಕ್ಯದಲ್ಲಿರುವ ದ್ವಿರುಕ್ತಿ ಪದ

(ಎ) ಚಿಕ್ಕ ಮಕ್ಕಳು (ಬಿ) ಆಟಪಾಠ

(ಸಿ) ಮತ್ತೆಮತ್ತೆ (ಡಿ) ಬಲುಚೆನ್ನ

## ವಿಭಾಗ – ಸಿ

## (ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)

**ಈ ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :** $4 \times 1 = 4$

ನಮ್ಮ ಸುತ್ತಿನ ಪ್ರಕೃತಿಯೆಲ್ಲಾ ಪಂಚಭೂತಗಳಿಂದ ಕೂಡಿದೆ. ಮಣ್ಣು, ನೀರು, ಬೆಂಕಿ, ಗಾಳಿ ಮತ್ತು ಆಕಾಶ ಇವು ಪಂಚಭೂತಗಳು. ಆಕಾಶ ಎಂದರೆ ನಾವು ನಮ್ಮ ತಲೆಯ ಮೇಲೆ ಕಾಣುವ 'ಗಗನ' ಅಲ್ಲ. ಸೃಷ್ಟಿಯಲ್ಲಿ ನಾವು ಏನೇನು ಕಾಣುತ್ತೇವೋ ಅದಕ್ಕೆಲ್ಲಾ ಇರುವುದಕ್ಕೆ ಅವಕಾಶವನ್ನು ಒದಗಿಸುವ ಅಂತರಿಕ್ಷ ( Space ) ಇದು ಆಕಾಶ.

ಶಬ್ಧ, ಸ್ಪರ್ಶ, ರೂಪ, ರಸ ಮತ್ತು ಗಂಧ ಎಂಬ ಈ ಐದು ಪಂಚಭೂತಗಳಿಗೆ ಸಂಬಂಧಿಸಿದ ಗುಣಗಳು. ಈ ಐದು ಗುಣಗಳು ಮಣ್ಣಿಗೆ ಉಂಟು. ಪೃಥ್ವಿಗೆ ಇರುವ ಹಾಗೆ ನಮಗೂ ಈ ಗುಣಗಳಿರುವುದರಿಂದ ನಾವು 'ಪಾರ್ಥಿವರು'.

ನೀರಿಗೆ ಗಂಧವಿಲ್ಲ, ಅಗ್ನಿಗೆ ಗಂಧ ಮತ್ತು ರಸವಿಲ್ಲ, ವಾಯುವಿಗೆ ಶಬ್ಧ ಮತ್ತು ಸ್ಪರ್ಶ ಮಾತ್ರ ಉಂಟು. ಶಬ್ಧ ಒಂದೇ ಆಕಾಶದ ಗುಣ.

ಮನಸ್ಸಿಗೂ ಮಾತಿಗೂ ನಿಲುಕದ ಭಗವಂತ ಈ ಐದು ಗುಣಗಳನ್ನೂ ಮೀರಿದವನು. ಆದ್ದರಿಂದಲೇ ಅವನು ಗುಣಾತೀತ.

*ಪ್ರಶ್ನೆಗಳು :*

40. ಪಂಚಭೂತಗಳಾವುವು ?

41. ಆಕಾಶ ಎಂದರೇನು ?

42. ಪಂಚಭೂತಗಳಿಗೆ ಸಂಬಂಧಿಸಿದ ಗುಣಗಳಾವುವು ?

43. ಭಗವಂತ ಗುಣಾತೀತ ಏಕೆ ?

44. **ಈ ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ :** 1 × 3 = 3

* ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು

* ಹಾಸಿಗೆ ಇದ್ದಷ್ಟು ಕಾಲುಚಾಚು

* ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ

45. ನಿಮ್ಮನ್ನು ಚಿತ್ರದುರ್ಗ ಜಿಲ್ಲೆಯ ತಾಳಿಕಟ್ಟೆ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ 'ರಹಮತ್/ಬಾನು' ಎಂದು ಭಾವಿಸಿಕೊಂಡು, ಸೂಕ್ತ ಕಾರಣ ತಿಳಿಸಿ ಎರಡು ದಿನ ರಜೆಯನ್ನು ಕೋರಿ ಶಾಲೆಯ ಮುಖ್ಯೋಪಾಧ್ಯಾಯರಿಗೆ ಒಂದು ಪತ್ರ ಬರೆಯಿರಿ. 1 × 4 = 4

***ಅಥವಾ***

ನಿಮ್ಮನ್ನು ಶೃಂಗೇರಿಯ ವಿದ್ಯಾರ್ಥಿನಿಲಯದಲ್ಲಿ ಇರುವ 'ಸಮನ್ಯು/ಅರ್ಪಿತ' ಎಂದು ಭಾವಿಸಿ ಶಾಲೆಯಲ್ಲಿ ಕೈಗೊಂಡಿರುವ ಶೈಕ್ಷಣಿಕ ಪ್ರವಾಸಕ್ಕೆ ಹೋಗುವ ಸಲುವಾಗಿ ಒಂದು ಸಾವಿರ ರೂಪಾಯಿಗಳನ್ನು ಕಳುಹಿಸುವಂತೆ ಕೋರಿ ಚಿಕ್ಕ ಬಳ್ಳಾಪುರ ಜಿಲ್ಲೆಯ ಚಿಂತಾಮಣಿಯಲ್ಲಿ ವಾಸವಾಗಿರುವ ನಿಮ್ಮ ತಂದೆಯವರಿಗೆ ಒಂದು ಪತ್ರ ಬರೆಯಿರಿ.

46. **ಈ ಕೆಳಗಿನ ಯಾವುದಾದರೂ ಒಂದು ವಿಷಯದ ಬಗ್ಗೆ ಹತ್ತು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ :** 1 × 4 = 4

* ಸ್ವಾತಂತ್ರ್ಯ ದಿನಾಚರಣೆಯ ಮಹತ್ವ

* ದೂರದರ್ಶನದ ಪ್ರಭಾವ

* 500 – 1000 ರೂ.ಗಳನ್ನು ಹಿಂದೆ ಪಡೆದಿರುವ ಪರಿಣಾಮ